ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳು

433 (904) ಶ್ರೀ ಅತ್ಯಾನಂದ ಎಂ.ಎಸ್. (ಮಂಡ್ಯ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯ ಸರ್ಕಾರಕ್ಕೆ ಕಳೆದ ಮೂರು ಆರ್ಥಿಕ ವರ್ಷಗಳಿಂದ ಖಾಸಗಿ ವೈದ್ಯ ಕಾಲೇಜನ್ನು ಪ್ರಾರಂಭಿಸಲು ಬಂದಿರುವ ಮನವಿಗಳೆಷ್ಟು? (ವಿವರ ಒದಗಿಸುವುದು)

2. ಈವರೆವಿಗೆ ಮಂಜೂರಾಗಿರುವ ಖಾಸಗಿ ವೈದ್ಯ ಕಾಲೇಜುಗಳು ಯಾವುವು?

3. ಮಂಡ್ಯ ಜಿಲ್ಲೆಯ ಪಿ.ಇ.ಎಸ್. ಸಂಸ್ಥೆಯ ಮನವಿ ಯಾವ ಹಂತದಲ್ಲಿದೆ?

ಡಾ. ಎ.ಬಿ. ಮಾಲಕ ರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು)

1. ಒಂದು.

ಶ್ರೀನಿವಾಸ ಟ್ರಸ್ಟ್ ಬೆಂಗಳೂರು ಇವರ ಮನವಿ ಬಂದಿದ್ದು ಅದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. ಇದಲ್ಲದೆ 3 ವರ್ಷಕ್ಕೂ ಹಿಂದೆ ಬಂದ 10 ಮನವಿಗಳಲ್ಲಿ 6ನ್ನು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ.

2. ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದ 7 ಮನವಿಗಳಲ್ಲಿ ಎಂ.ವಿ.ಜೆ.ವೈದ್ಯಕೀಯ ಕಾಲೇಜಿಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿದೆ.

3. ಅಗತ್ಯ ಮೂಲಭೂತ ಸೌಲಭ್ಯಗಳು ಇಲ್ಲದೆ ಇರುವುದರಿಂದ ಈ ಸಂಸ್ಥೆಯ ಮನವಿಯನ್ನು ಪರಿಗಣಿಸಿರುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರದ ಬಳಕೆಯಿಂದಾಗಿ ಕುಡಿಯುವ ನೀರು ಕಲುಷಿತವಾಗುತ್ತಾ ಇರುವುದು

434 (905) ಶ್ರೀ ಅತ್ಯಾನಂದ ಎಂ.ಎಸ್. (ಮಂಡ್ಯ): ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ಜಿಲ್ಲೆಯು ಕೃಷಿ ಪ್ರದೇಶವಾಗಿದ್ದು ರಾಸಾಯನಿಕ ಗೊಬ್ಬರದ ಬಳಕೆಯಿಂದಾಗಿ, ಜಿಲ್ಲೆಯಲ್ಲಿ ಕುಡಿಯುವ ನೀರು ಕಲುಷಿತವಾಗುತ್ತಾ ಇರುವುದನ್ನು ಸರ್ಕಾರವು ಗಮನಿಸಿದೆಯೆ;

2. ಇದಕ್ಕೆ ಪರಿಹಾರ ರೂಪವಾಗಿ ಸರ್ಕಾರವು ಕ್ರಮವನ್ನೇನಾದರೂ ರೂಪಿಸಿದಿಯೆ;

3. ರೂಪಿಸಿದ್ದಲ್ಲಿ, ಇದರ ವಿವರಗಳೇನು?

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು):

1. ಹೌದು, ಮಂಡ್ಯ ಜಿಲ್ಲೆಯ 1411 ಜನವಸತಿಗಳಲ್ಲಿ ಕುಡಿಯುವ ನೀರು ರಾಸಾಯನಿಕವಾಗಿ ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2. ಅಧಿಕ ಫ್ಲೋರೈಡ್, ಅಧಿಕ ಕಬ್ಬಿಣಾಂಶ, ಅಧಿಕ ಲವಣಾಂಶ ಇತ್ಯಾದಿ ಕಾರಣಗಳಿಂದಾಗಿ ಕುಡಿಯುವ ನೀರು ಕಲುಷಿತವಾಗಿರುವಂತಹ ಗ್ರಾಮೀಣ ಜನವಸತಿಗಳಿಗೆ ಸುರಕ್ಷಿತ ಕುಡಿಯುವ